L. F. Dispensary for Byalya Village

Q.—744. **Sri MUDDURAMAIAH** (Koratagere—Madhugiri) [on behalf of SRI MALI MARIYAPPA (Pavagada)].—

Will the Government be pleased to state :—

(*a*) whether the villagers of Byalya, Puravara Hobli of Madhugiri Taluk, are asking for grant of a R.S.L.F. dispensary to their village ;

(*b*) whether the villagers have offered to give a good building for the location of the hospital ?

A.—**Sri T. CHANNIAH** (Minister for Public Health and Local Self-Government).—

(*a*) Yes, a request was made in 1949.

(*b*) No.

ಶ್ರೀ ಮುದ್ದುರಾಮಯ್ಯ.—ಸ್ವಾಮಿ, ತಾವು ಬ್ಯಾಲ್ಯದ ಗ್ರಾಮಕ್ಕೆ ಕೊಡಬೇಕೆಂದು ಕೇಳಿಕೊಂಡಿರುವ ಆ ಎಲ್. ಎಫ್. ಡಿಸ್ಪೆನ್ಸರಿಗೋಸ್ಕರವಾಗಿ ಅಲ್ಲಿ ಒಬ್ಬ ದಾನಿಗಳು 50 ಸಾವಿರ ರೂಪಾಯಿಗಳ ವೆಚ್ಚದಲ್ಲಿ ಕಟ್ಟಡಗಳನ್ನು ಕಟ್ಟಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಎಂದು ಕೇಳಿದರೆ ತಾವು 'ಇಲ್ಲ' ಎಂದು ಉತ್ತರ ಕೊಟ್ಟಿದ್ದೀರಿ. ಹಾಗಾದರೆ ಆ ವಿಚಾರ ತಮ್ಮ ಗಮನಕ್ಕೆ ಬಂದಿಲ್ಲವೇ ?

Sri T. CHANNIAH.—It is a different question. Sri Mali Mariappa has tabled it.

Mr. SPEAKER.—He has been authorized.

ಶ್ರೀ ಮುದ್ದುರಾಮಯ್ಯ.—(ಬ) ಪ್ರಶ್ನೆಗೆ ತಾವು 'ಇಲ್ಲ' ಎಂದು ಉತ್ತರ ಕೊಟ್ಟಿದ್ದೀರಿ. ಆದರೆ ಅಲ್ಲಿ ಕಟ್ಟಡಗಳನ್ನು ಈಗಾಗಲೇ ಕಟ್ಟಿಸಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಟಿ. ಚನ್ನಯ್ಯ.—'ಇಲ್ಲ' ಎಂದು ಉತ್ತರದಲ್ಲೇ ಹೇಳಿದೆ.

ಶ್ರೀ ಮುದ್ದುರಾಮಯ್ಯ.—ಈ ಹಿಂದೆಯೇ ತಾವು 1954-55 ನೆಯ ಸಾಲಿನ ಬಡ್ಜೆಟ್ ಅಧಿವೇಶನದಲ್ಲಿ ನಾನು ತಂದಿದ್ದಂಥ ಇದೇ ಸಂಬಂಧವಾದ ಒಂದು ಪ್ರಶ್ನೆಗೆ ಉತ್ತರ ಕೊಡುತ್ತ ಅಲ್ಲಿ ಹಾಸ್ ಕಟ್ಟಡಗಳನ್ನು ಕಟ್ಟಿಸಿದ್ದರೆ ಅಲ್ಲಿಗೆ ಆದಷ್ಟು ಜಾಗ್ರತೆಯಾಗಿ ಆಸ್ಪತ್ರೆಯನ್ನು ಮಂಜೂರು ಮಾಡುತ್ತೇವೆಂದು ತಾವು ಭರವಸೆ ಕೊಟ್ಟಿರಲಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಹಾಗಿದ್ದರೆ ಆ ವಿಚಾರವನ್ನು ನಾನು ಪುನಃ ಪರಿಶೀಲನೆ ಮಾಡುತ್ತೇನೆ.

ಶ್ರೀ ಮುದ್ದುರಾಮಯ್ಯ.—ಈಗಾಗಲೆ ಅಲ್ಲಿ ಒಬ್ಬ ದಾನಿಗಳು 50 ಸಾವಿರದ ಮೇಲೆ ಖರ್ಚು ಮಾಡಿ ಕಟ್ಟಡಗಳನ್ನು ಈ ಆಸ್ಪತ್ರೆಗೋಸ್ಕರವಾಗಿ ಕಟ್ಟಿಸಿ ಎರಡು ಮೂರು ವರ್ಷಗಳ ಮೇಲಾಗಿರುವುದರಿಂದ ತಾವು ಈಗಲಾದರೂ ಜಾಗ್ರತೆಯಾಗಿ ಆ ಸ್ಥಳದಲ್ಲಿ ಒಂದು ಆಸ್ಪತ್ರೆಯನ್ನೇರ್ಪಡಿಸಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಆ ಪ್ರದೇಶದಲ್ಲಿ ಈ ಆಸ್ಪತ್ರೆಗೂ ಮತ್ತು ಆಸ್ಪತ್ರೆಯ ಸಿಬ್ಬಂದಿಗೂ ಸರಿಯಾದ ಕಟ್ಟಡಗಳನ್ನು ಒದಗಿಸಿದ್ದರೆ ಆ ವಿಚಾರವನ್ನು ನಾನು ಪರಿಶೀಲನೆ ಮಾಡುತ್ತೇನೆ.

Mr. SPEAKER.—The Hon'ble Member put a question in the previous session of the Assembly. The Government answered that one of the local men had donated a building. In that case, will the Government start the dispensary : that is the question.

Sri T. CHANNIAH.—The matter will be examined.

ಶ್ರೀ ಬಿ. ಸಿ. ನಂಜುಂಡಯ್ಯ.—ಈ ಅಸೆಂಬ್ಲಿಯ ಮುಂದೆ ಸದಸ್ಯರ ಪ್ರಶ್ನೆಗೆ ಉತ್ತರ ಕೊಡುವ ಮುನ್ನ ಈ ಪ್ರಶ್ನೆಗಳನ್ನು ಸಂಬಂಧಪಟ್ಟ ಲೋಕಲ್ ಅಧಿಕಾರಿಗಳಿಗೆ ಕಳುಹಿಸಿ, ಅವರಿಂದ ಉತ್ತರಗಳನ್ನು ತರಿಸಿಕೊಂಡು ತಾನೆ ತಾವು ಇಲ್ಲಿ ಉತ್ತರ ಗಳನ್ನು ಕೊಡಬೇಕಾದದು ?

Sri T. CHANNIAH.—That is the procedure adopted now.

ಶ್ರೀ ಬಿ. ಸಿ. ನಂಜುಂಡಯ್ಯ.—ಕಟ್ಟಡ ಕಟ್ಟಿಸಿ ಎರಡು ಮೂರು ವರ್ಷಗಳ ಮೇಲಾಗಿದ್ದರೂ ಈಗಲೂ ಸಹ ಆ ವಿಚಾರ ಸರ್ಕಾರದವರ ಗಮನಕ್ಕೆ ಬಂದಿಲ್ಲ ಎಂದು ಹೀಗೆ ಅಸಂಬದ್ಧ ಉತ್ತರ ಕಳುಹಿಸಲು ಕಾರಣ ವೇನೆಂಬುದನ್ನು ತಾವು ದಯವಿಟ್ಟು ವಿಚಾರ ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಅದನ್ನು ಪುನಃ ಪರಿಶೀಲನೆ ಮಾಡುತ್ತೇನೆಂದು ಆಗಲೇ ಉತ್ತರ ಕೊಟ್ಟಿದ್ದೇನೆ.

ಶ್ರೀ ಎ. ಪಿ. ನರಸಿಂಹರೆಡ್ಡಿ.—ಒಂದಾವರ್ತಿ ಈ ಅಸೆಂಬ್ಲಿಯ ಮುಂದೆ ಕಟ್ಟಡ ಕಟ್ಟಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆಂದು ಉತ್ತರ ಕೊಟ್ಟು ಪುನಃ ಅದೇ ಪ್ರಶ್ನೆಗೆ 'ಇಲ್ಲ' ಎಂದು ಉತ್ತರ ಕೊಡಲು ಕಾರಣರ್ಯಾರು ಎಂಬುದನ್ನು ಸಹ ತಾವು ಪರಿಶೀಲನೆ ಮಾಡುತ್ತೀರಾ ?

ಶ್ರೀ ಕೆ. ಹನುಮಂತಯ್ಯ.—ಮಾಡುತ್ತೇವೆಂದು ಆಗಲೇ ಹೇಳಿದ್ದಾರೆ.

General Hospital, Chitaldrug.

Q.—754. **Sri T. HANUMAIAH** (Hiriyur—Scheduled Castes).—

Will the Government be pleased to state :—

(*a*) the total cost of the new construction of General Hospital building at Chitaldrug ;

(*b*) the total amount sanctioned for the above hospital by the Government up till now ;

(*c*) the amount given from the Hospital Committee and individuals, donations and subscriptions from local people in Chitaldrug District ;

(*d*) when the Hospital is going to be opened ;